# ಕಾರ್ಯಕಾರಿ ಸಾರಂಶ

## ಎರಡನೇ ಮತ್ತು ಮೂರನೇ ಹಂತದ ವಸಂತನರಸಾಪುರ ಕೈಗಾರಿಕಾ ಪ್ರದೇಶ ವಿಸ್ತರಣೆ ಯೋಜನೆಯಿಂದ ಪರಿಸರದ ಮೇಲೆ ಆಗುವ ಪರಿಣಾಮದ ವಿಶ್ಲೇಷಣೆ;

**ಯೋಜನೆ ಅಭಿವೃಧಿಪಡಿಸುವವರು:**

KIADB
Land of Opportunities
KARNATAKA INDUSTRIAL AREAS DEVELOPMENT BOARD
(A Government of Karnataka Undertaking)
ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
Head Office
14/3, 2nd floor, R.P Buildings, Nrupathunga Road
Bengaluru-560001

**ಪರಿಸರ ಸಮಲೋಚಕರು:**

**ಮೇ//: ರಾಮಕೀ ಎನ್ವರೋ ಇಂಜಿನಿಯರ್ಸ್**
**ನಂ. 6-3-1090, 4ನೇ ಮಹಡಿ, ಬಿ–ಬ್ಲಾಕ್**
**ಟಿ.ಎಸ್.ಆರ್. ಟವರ್ಸ್, ರಾಜಭವನ ರಸ್ತೆ**
**ಸೋಮಾಜಿಗುಡ್ಡ, ಹೈದಾರಾಬಾದ್ – 82**

# [illegible] ಅಧ್ಯಯನ

## 1.ಪ್ರಸ್ತಾವನೆ:

ಕರ್ನಾಟಕ ರಾಜ್ಯ ಕೈಗಾರಿಕಾ ಅಭಿವೃದ್ಧಿ ಮಂಡಳಿಯ ಒಂದು ಕರ್ನಾಟಕ ಸರ್ಕಾರದ ಸಂಸ್ಥೆಯಾಗಿರುತ್ತದೆ.

## 1.1 ಯೋಜನೆಯ ಮೂಲ ಉದ್ದೇಶಗಳು:

- ಕರ್ನಾಟಕ ರಾಜ್ಯ ಕೈಗಾರಿಕಾ ಅಭಿವೃದ್ಧಿ ಮಂಡಳಿಯ ಮೂಲ ಉದ್ದೇಶ ಕೈಗಾರಿಕೆಗಳನ್ನು ರಾಜ್ಯದಲ್ಲಿ ಕ್ರಮ ಬದ್ಧವಾಗಿ ಮತ್ತು ತ್ವರಿತಗತಿಯಲ್ಲಿ ಅಭಿವೃದ್ಧಿ ಪಡಿಸುವುದು.
- ಸರ್ಕಾರದ ಆಶೋತ್ತರಗಳನ್ನು ಕರ್ನಾಟಕ ರಾಜ್ಯ ಕೈಗಾರಿಕಾ ಅಭಿವೃದ್ಧಿ ಮಂಡಳಿಯ ಕಾಯ್ದೆಯ ಪರಿಧಿಯಲ್ಲಿ ಅಳವಡಿಸಲು ಕೈಗಾರಿಕೆಗಳಿಗೆ ಸಹಾಯ ಮಾಡುವುದು.

ಎರಡನೇ ಮತ್ತು ಮೂರನೇ ಹ0ತದ ವಸಂತನರಸಾಪುರ ಕೈಗಾರಿಕಾ ಪ್ರದೇಶವನ್ನು ಸುಮಾರು 2861 ಎಕರೆ ಪ್ರದೇಶದಲ್ಲಿ ಸ್ಥಾಪಿಸಲು ಗುರುತಿಸಿದ್ದು, ಇದು ಸುಮಾರು 63 ಕಿ.ಮಿ. ಬೆಂಗಳೂರಿನಿಂದ ದೂರವಿರುತ್ತದೆ. ಈ ಪ್ರದೇಶವು ತುಮಕೂರು ಜಿಲ್ಲೆಯ ಭಾಗವಾಗಿರುತ್ತದೆ. ಈ ಯೋಜನೆಯ ಮೂಲ ಉದ್ದೇಶ ಯಾವುದೇ ಭಂಗವಿರದ ಉತ್ಪಾದನೆಯ ಪರಿಸರವನ್ನು, ಐಟಿ/ಬಿಟಿ, ಎಲೆಕ್ಟ್ರಾನಿಕ್ ಕೈಗಾರಿಕೆಗಳು, ಗಾರ್ಮೆಂಟ್ಸ್ ಮತ್ತು ಆಹಾರ ಸಂಸ್ಕಾರಣ ಘಟಕಗಳು ಇತರೆ ಕೈಗಾರಿಕಾ ಘಟಕಗಳಲ್ಲಿ ಸ್ಥಾಪನೆ ಮಾಡುವುದು.

## 1.2 ಸ್ಥಳದ ಪ್ರಮುಖ ಲಕ್ಷಣಗಳು:

- ಕೈಗಾರಿಕಾ ಪ್ರದೇಶವು ಇಂಡಿಯಾ ಸರ್ವೇ topo sheets. ಸಂಖ್ಯೆ 57 C/14, 57 C/15, 57 G/2, 57 G/3 ಅನ್ವಯ $13^0$ 30’ 51”N ಮತ್ತು $77^0$ 1’ 40” E ನಡುವೆ ಇರುತ್ತದೆ.
- ನಿವೇಶನದ ಸರಾಸರಿ ಎತ್ತರ ಸಮುದ್ರ ಮಟ್ಟಕ್ಕಿಂತ 830 ಮೀಟರ್. ಭೂಕಂಪ ಶಾಸ್ತ್ರದ ಅನ್ವಯ ಕೈಗಾರಿಕಾ ಪ್ರದೇಶವು ನಿವೇಶನವು ಭದ್ರವಾದ ವಲಯಿ ((IS 1893 (ಭಾಗ1) 2002ರ ಅನ್ವಯ ವಲಯ).
- ಪರಿಸರ ಜೀವಿವಿಜ್ಞಾನದಂತ ಸೂಕ್ಷ್ಮ ವಲಯಗಳಾದ - ರಾಷ್ಟ್ರೀಯ ಉದ್ಯಾನವನ, ವನ್ಯಜೀವಿ ಅಭಯಾರಣ್ಯ ಮುಂತಾದವು ಯಾವುದೂ 10 ಕಿಲೋ ಮೀಟರ್ ವರ್ತುಲದ ಅಂತರದಲ್ಲಿ ಇರುವುದಿಲ್ಲ.
- ಉತ್ತರ-ಪೂರ್ವ ದಿಕ್ಕಿಗೆ (7.5 ಕಿಲೋಮೀಟರ್) ಅಂತರದಲ್ಲಿ ಮಧುಗಿರಿ ಕಾಯ್ದರಿಸಿದ ಅರಣ್ಯ, ಉತ್ತರ ದಿಕ್ಕಿಗೆ (7.0 ಕಿಲೋಮೀಟರ್) ಬಡವನಹಳ್ಳಿ ಕಾಯ್ದರಿಸಿದ ಅರಣ್ಯ, ಪೂರ್ವ ದಿಕ್ಕಿಗೆ **ಕಾವರ್ಗಲು** ಕಾಯ್ದರಿಸಿದ ಅರಣ್ಯ (9.0 ಕಿಲೋಮೀಟರ್)_ ಮತ್ತು **ಕೊಳಿಕಲು** ಕಾಯ್ದರಿಸಿದ ಅರಣ್ಯ (7.0 ಕಿಲೋಮೀಟರ್) ಉತ್ತರ-ಪೂರ್ವ ದಿಕ್ಕಿಗೆ **ಇರುತ್ತದೆ.**
- ಬೆಂಗಳೂರು - **ಪೂನಾ** ಗೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿ (NH- 4) 0.4 ಕಿ.ಮಿ ಅಂತರದಲ್ಲಿ ಇರುತ್ತದೆ
- ದೇವನಹಳ್ಳಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ, ಬೆಂಗಳೂರು 103 KM ದೂರದ ಅಂತರದಲ್ಲಿ ಇರುತ್ತದೆ. ಅತಿ ಹತ್ತಿರದ ರೈಲು ನಿಲ್ದಾಣವೆಂದರೆ 20 ಕಿ.ಮಿ. ದೂರದಲ್ಲಿರುವ ತುಮಕೂರು ರೈಲು ನಿಲ್ದಾಣ.

## 2. ಯೋಜನೆಯ ವಿವರಣೆ:

ಪ್ರಸ್ತಾಪಿತ ಎರಡನೇ ಮತ್ತು ಮೂರನೇ ಹ0ತದ ಕೈಗಾರಿಕಾ ಪ್ರದೇಶದಲ್ಲಿ 1912 ಎಕರೆ ಭೂಮಿಯನ್ನು ಕೈಗಾರಿಕೆಗೆಳ ಪ್ಲಾಟ್‌ನ್ನು ಮಾಡಲಾಗುವುದು. 826 ಎಕರೆ ಭೂಮಿಯನ್ನು

ಇಮಎ, ಕೆಪಿಟಿಸಿಎಲ್, ಕೆಎಸ್ಎಸ್ಇಡಿಸಿ, ಇತರೆ ಬಳಕೆಗೆ ಕಾಯ್ದರಿಸಲಾಗಿದೆ.

**ಪ್ರಸ್ತಾಪಿತ ೨ನೇ ಮತ್ತು ೩ನೇ ಹಂತದ ವಸಂತನರಸಾಪುರ ಕೈಗಾರಿಕ ಪ್ರದೇಶದ ಭೂಮಿಯ ಪಟ್ಟಿ 1 ರಲ್ಲಿ ಹೆಸರಿಸಿರುವ ಹಳ್ಳಿಗಳಿಗೆ ಸೇರಿರುತ್ತದೆ.**

| ಕ.ಸಂ | ವಸಂತನರಸಾಪುರ 2ನೇ ಹಂತ | | ವಸಂತನರಸಾಪುರ 3ನೇ ಹಂತ | |
|---|---|---|---|---|
| | ಹಳ್ಳಿಯ ಹೆಸರು | ಭೂಮಿ (ಹೆಕ್ಟರ್‌ಗಳಲ್ಲಿ) | ಹಳ್ಳಿಯ ಹೆಸರು | ಭೂಮಿ (ಹೆಕ್ಟರ್‌ಗಳಲ್ಲಿ) |
| 1 | ಯಳದಾಳು | 434 | ವಸಂತನರಸಾಪುರ | 22.27 |
| 2 | ನಾಗೇನಹಳ್ಳಿ | 68.4 | ಕೆಂಪನದೊಡ್ಡೇರಿ | 50.60 |
| | ಒಟ್ಟು | 502.4 | ಬತಸಂದ್ರ | 112.00 |
| | | | ಕೆಂಚೆನಹಳ್ಳಿ | 19.83 |
| | | | ಸಂಗೆನಹಳ್ಳಿ | 140.63 |
| | | | ತಿಪ್ಪೇದಾಸರಹಳ್ಳಿ | 150.20 |
| | | | ಬುವಜನಹಳ್ಳಿ | 100.00 |
| | | | ಕೆಂಪದಹಳ್ಳಿ | 4.1 |
| | | | ದೊಡ್ಡನಹಳ್ಳಿ | 4.45 |
| | | | ಒಟ್ಟು | **604.11** |

ಪ್ರಸ್ತಾಪಿತ ಭೂಮಿ ಉಪಯೋಗದ ವಿವರವನ್ನು ಪಟ್ಟಿ 2 ರಲ್ಲಿ ನೀಡಲಾಗಿದೆ.

**ಪಟ್ಟಿ 2: ಭೂಮಿ ಬಳಕೆಯ ವಿಶ್ಲೇಷಣೆ**

| ಕ್ರ.ಸಂ. | ವರ್ಣನೆ | ಎರಡನೇ ಹ0ತ (ಭೂಮಿ ಹೆಕ್ಟರ್‌ಗಳಲ್ಲಿ) | ಮೂರನೇ ಹ0ತ (ಭೂಮಿ (ಹೆಕ್ಟರ್‌ಗಳಲ್ಲಿ) |
|---|---|---|---|
| 1 | ಕೈಗಾರಿಕಾ ಪ್ರದೇಶ | 262.77 | 144.71 |
| 2 | ಮೂಲಭೂತ ಸೌರ್ಕಯಗಳು | 25.65 | 15.43 |
| 3 | ವಾಣಿಜ್ಯ | 5.03 | 9.85 |
| 4 | ವಾಸದ ಪ್ರದೇಶ | 40.57 | 33.82 |
| 5 | ಪಾರ್ಕ ಮತ್ತು ಬಫ಼ರ್ | 79.77 | 45.47 |
| 6 | ಟ್ರಕ್ ಪಾರಕಿ0ಗ್ | 22.56 | 15.60 |

| | | | |
|---|---|---|---|
| 7 | ರಸ್ತೆಗಳು | 75.10 | 47.24 |
| | **ಒಟ್ಟು** | **511.45** | **312.12** |

ಪ್ರಸ್ತಾಪಿಸಲಾಗಿರುವ ಕೈಗಾರಿಕಾ ಪ್ರದೇಶಕ್ಕೆ ಒಟ್ಟು ನೀರಿನ ಅಗತ್ಯತೆ 4 ಎಂಎಲ್‌ಡಿ ಮತ್ತು

ಈ ಕೆಳಗಿನ ವಿವರಗಳು ನೀರಿನ ಉಪಯೋಗದ ಬಗ್ಗೆ ತಿಳಿಸುತ್ತದೆ.

## <u>ನೀರಿನ ಅಗತ್ಯತೆಗಳು</u>

| ಕ್ರ.ಸಂ. | ನೀರು ಬಳಸುವ ಪ್ರದೇಶ ಎರಡನೇ ಹ0ತ & ಮೂರನೇ ಹ0ತ | ಬಳಸುವ ಪ್ರಮಾಣ(ಎಂಎಲ್‌ಡಿ) |
|---|---|---|
| 1 | ಕೈಗಾರಿಕೆಗಳು | 2.00 |
| 2 | ಗೃಹಬಳಕೆ | 1.00 |
| 3 | ಹಸಿರು ಪಟ್ಟಿ | 1.00 |

ಈ ಒಂದು ಕಾರಣದಿಂದ, ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ ಹೇಮಾವತಿ ನದಿ ನೀರನ್ನು ಕೂಪುರು ಕೆರೆಗೆ ಹರಿಸಿ ಅಲ್ಲಿಂದ ನೀರನ್ನು ಕೈಗಾರಿಕಾ ಪ್ರದೇಶಕ್ಕೆ ಕೊಡಲಾಗುವುದು.



ಮೆ. ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ, ಬೆಂಗಳೂರು ಉದ್ದೇಶಿಸಿರುವ **ಎರಡನೇ ಹ0ತ & ಮೂರನೇ ಹ0ತ** ವಸಂತನರಾಸಪುರ ಯೋಜನೆ, ತುಮಕೂರು ಜಿಲ್ಲೆ ಪರಿಸರ ಪರಿಣಾಮಗಳ ಅಧ್ಯಯನವನ್ನು ಮೆ//. ರಾಮಕೀ ಎನ್ವಿರೋ ಇಂಜಿನಿಯರ್ಸ್, ಬೆಂಗಳೂರು ಇವರಿಗೆ ವಹಿಸಿರುತ್ತದೆ. ಅದರಂತೆ, ರಾಮಕೀ ಎನ್ವಿರೋ ಇಂಜನಿಯರ್ಸ್ ಯೋಜನೆಯ ಕರಡು ಪರಿಸರ ಅಘಾತ ಅಧ್ಯಯನದ ವರದಿಯನ್ನು ತಯಾರಿಸಿದ್ದಾರೆ. ಅದರ ಮುಖ್ಯ ವಿವರಣೆಗಳು ಇಂತಿದೆ.

1. ಯೋಜನೆಯ ಹತ್ತು ಕಿ.ಮೀ.ಸುತ್ತಳತೆಯಲ್ಲಿ ವಾಯು, ನೀರು, ಶಬ್ದ, ಮಣ್ಣು, ಪ್ರಾಣಿ, ಪಕ್ಷಿ ಸಂಕುಲ ಹಾಗೂ ಸಾಮಾಜಿಕ ಆರ್ಥಿಕ ಪರಿಸರದ ಮೇಲಾಗುವ ಪರಿಣಾಮಗಳ ಅಧ್ಯಯನ.

2. ಪ್ರಸ್ತಾಪಿತ ಯೋಜನೆಯಿಂದಾಗುವ ವಾಯು ತ್ಯಾಜ್ಯಗಳು, ನೀರಿನ ತ್ಯಾಜ್ಯ, ಘನ ತ್ಯಾಜ್ಯಗಳ ಪರಿಣಾಮ ಹಾಗೂ ಶಬ್ದ ಮಾಲಿನ್ಯದಿಂದ ಪರಿಸರದ ಮೇಲಾಗುವ ಪರಿಣಾಮಗಳ ವಿಸ್ತ್ರತ ವಿಶ್ಲೇಷಣೆ

3. ವಾಯು ವ್ಯಾಜ್ಯ ನಿರ್ವಹಣೆ, ತ್ಯಾಜ್ಯ ನೀರಿನ ನಿರ್ವಹಣೆ, ಶಬ್ಧ ಮಾಲಿನ್ಯದ ನಿರ್ವಹಣೆ ಹಾಗೂ ಘನತ್ಯಾಜ್ಯಗಳ ನಿರ್ವಹಣೆಯನ್ನು ವಿಸ್ತ್ರತವಾಗಿ ವಿಶ್ಲೇಷಸಿರುವ ಪರಿಸರ ನಿರ್ವಹಣ ನಕ್ಷೆ.

4. ಯೋಜನೆಯ ನಂತರದ ಪರಿಸರ ವಿಶ್ಲೇಷಣೆ ನಕ್ಷೆ.

ಇಂಧನವನ್ನು ಕರ್ನಾಟಕ ಇಂಧನ ಇಲಾಖೆಯಿಂದ ಪಡೆಯಲಾಗುತ್ತದೆ. ಪ್ರತಿಯೊಂದು ಕೈಗಾರಿಕೆಯು ಸ್ವತಃವಾಗಿ ತ್ಯಾಜ್ಯ ಶುದ್ಧೀಕರಣ ಘಟಕವನ್ನು ಸ್ಥಾಪಿಸಲು ಸೂಚಿಸಲಾಗುತ್ತದೆ, ಮತ್ತು ಕಾಯ್ದೆಯ ಪ್ರಕಾರ ಘಟಕವು ಕಾರ್ಯ ನಿರ್ವಹಿಸುತ್ತವೆ.

ಎಲ್ಲಾ ಘಟಕಗಳು ಅಪಾಯಕಾರಿ ತ್ಯಾಜ್ಯವನ್ನು ಪ್ರಾಥಮಿಕವಾಗಿ ಶುದ್ಧೀಕರಿಸಿದ ನಂತರ ಹತ್ತಿರದ ತಾಂತ್ರಿಕ ಭೂ ತುಂಬಿಕೆ ಸ್ಥಳಕ್ಕೆ ಕಲುಹಿಸಲು ಸೂಚಿಸಲಾಗುತ್ತದೆ,

## ನಿರೀಕ್ಷಿಸಿರುವ ಪರಿಸರದ ಮೇಲಿನ ಪರಿಣಾಮಗಳು ಮತ್ತು ಅವುಗಳನ್ನು ತಡೆಗಟ್ಟುವ ಕ್ರಮಗಳು:

ತಳಹದಿಯ ಪರಿಸರ ಮಾದರಿಗಳ ಸಂಗ್ರಹಣೆಯ ವಿವರ:

ಹವಾಮಾನ, ವಾಯುಗುಣ, ನೀರಿನ ಗುಣಮಟ್ಟ, ಶಬ್ಧ ಮಾಲಿನ್ಯದ ಪರಿಣಾಮ ಹಾಗೂ ೧೦.೦ ಕಿ.ಲೋ ಮೀಟರ್‌ಸುತ್ತಳತೆಯ ಪರಿಮಿತಿಯ ಜನರ ಸಾಮಾಜಿಕ ಹಾಗೂ ಆರ್ಥಿಕ ಪರಿಸ್ಥಿತಿಯ ವಿವರಗಳನ್ನು ಸಂಗ್ರಹಸಿ ಅಧ್ಯಯನ ಮಾಡಲಾಗಿದೆ.

ಅಧ್ಯಯನ ಪ್ರದೇಶದ ಸುತ್ತ ಮುತ್ತಲೂ ಯಾವುದೇ ರೀತಿಯ ದೊಡ್ಡ ಹಳ್ಳಕೊಳ್ಳಗಳು ಇರುವುದಿಲ್ಲ ಮತ್ತು ನೀರಿನ ಮಾದರಿಗಳನ್ನು ಪರೀಕ್ಷಿಸಲಾಗಿದ್ದು, ನೀರು ಕುಡಿಯಲು ಮತ್ತು ಇನ್ನಿತರ ಬಳಕೆಗೆ ಗುಣಮಟ್ಟವನ್ನು ಪರೀಕ್ಷಿಸಲಾಗಿದ್ದು ಇದು ರಾಷ್ಟ್ರೀಯ ಪರ್ಯಾವರಣದ ಅಂಶಗಳು ನಿರ್ಣಯಿಸಿದ ಪ್ರಮಾಣಗಳಿಗಿಂತಲೂ ಕಡಿಮೆಯಾಗಿರುತ್ತದೆ.

ಅದೇ ರೀತಿ ಶಬ್ಧ ಮಾಲಿನ್ಯವನ್ನು ಪರೀಕ್ಷಿಸಲಾಗಿದ್ದು, ಹಗಲು ಮತ್ತು ರಾತ್ರಿಯ ಶಬ್ದದ ಪ್ರಮಾಣವು 35.9 (ಡಿಬಿ) ರಿಂದ 58.6 (ಡಿಬಿ) ಇದ್ದು, ರಾಷ್ಟ್ರೀಯ ಮಾನದಂಡದ ವಾಣಿಜ್ಯ ಸ್ಥಳಗಳ ಜೊತೆ ಹೋಲಿಸಿದಾಗ, ಶಬ್ದದ ಮಟ್ಟವು ಸಹ ಮಿತಿಯೊಳಗೆ ಇದೆ.

### ಸಸ್ಯ ಮತ್ತು ಗಿಡಗಳ ವಿವರ :

**ಕೈಗಾರಿಕೆಗೆ ಗುರಿತಿಸಿರುವ ಪ್ರದೇಶದಲ್ಲಿ ಒಣ ಮಿಶ್ರಿತ ಮುಳ್ಳಿನ ಗಿಡಗಳಿಂದ ಕೂಡಿದ್ದು, ಈ ಪ್ರದೇಶದಲ್ಲಿ ಸಸ್ಯ ಮತ್ತು ಗಿಡಗಳು ವಿರಳವಾಗಿದ್ದು ಸಾಮಾನ್ಯ ಪ್ರಕೃತಿ ವರ್ಗದಲ್ಲಿ ಕಂಡು ಬರುತ್ತವೆ.**

ಪ್ರಾಣಿಗಳ ವಿವರ: ಈ ಪ್ರದೇಶಗಳು ಸುತ್ತಮುತ್ತಲು ಯಾವುದೇ ತರಹದ ದೊಡ್ಡ ದೊಡ್ಡ ಭಯಾನಕವಾದ ಪ್ರಾಣಿಗಳು ಕಂಡು ಬರುವುದಿಲ್ಲ ಮೊಲ, ನರಿ, ಹಾವು, ಮುಂತಾದ ಪ್ರಾಣಿಗಳು ವಾಸಿಸುತ್ತವೆ. ಪಕ್ಷಿಗಳೆಂದರೆ, ಹದ್ದು, ಪಾರಿವಾಳ, ಕೋಗಿಲೆ, ಕಾಗೆ, ಗುಬ್ಬಚ್ಚಿ, ಮುಂತಾದವುಗಳು ಕಂಡು ಬರುತ್ತವೆ.

ಸಾಮಾಜಿಕ. ಆರ್ಥಿಕ ವ್ಯವಸ್ಥೆ:

ಉದ್ದೇಶಿತ ಕೈಗಾರಿಕ ಪ್ರದೇಶ ಅಭಿವೃದ್ಧಿಯಿಂದ ಅಧ್ಯಯನ ಪ್ರದೇಶದ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಗಳು ಉತ್ತಮ ಗೊಳ್ಳುವುದರಲ್ಲಿ ಸಂದೇಹವಿಲ್ಲ. ಈ ಕೈಗಾರಿಕ ಪ್ರದೇಶ ಅಭಿವೃದ್ಧಿಯಿಂದ ಜನರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಿ ಕೊಟ್ಟಂತಾಗುತ್ತದೆ. ಮತ್ತು ಸುತ್ತಮುತ್ತಲಿನ ಜನರಿಗೆ ವ್ಯಾಪಾರ ವಹಿವಾಟಿನಲ್ಲಿ ತೊಡಗಿಸಿಕೊಳ್ಳಲು ಅವಕಾಶಮಾಡಿಕೊಟ್ಟಂತಾಗುತ್ತದೆ.

ಕೈಗಾರಿಕಾ ಪ್ರದೇಶ ಅಭಿವೃದ್ಧಿಯು ಅಧ್ಯಯನ ಪ್ರದೇಶದ ಜನರ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸುವ ಜೊತೆಗೆ ಸರ್ಕಾರಕ್ಕೆ ವರಮಾನವನ್ನು ತೆರಿಗೆ, ರಾಜಧನ, ಮತ್ತು ವಿದೇಶಿ ವಿನಿಮಯ ತಂದುಕೊಡುತ್ತದೆ.

ಅಧ್ಯಯನ ಪ್ರದೇಶದಲ್ಲಿ ಯಾವುದೇ ರೀತಿಯ ಚಾರಿತ್ರಿಕ, ಪುರಾತತ್ವ ಅಥವಾ ಇತರೆ ಮಹತ್ವದ ಸ್ಥಳಗಳಾವುವು ಇರುವುದು ಕಂಡು ಬಂದಿಲ್ಲ.